सत्यमेव जयते
Goverment Of India

ಸ್ವಚ್ಛ ಭಾರತ
ಒಂದು ಹೆಜ್ಜೆ ಸ್ವಚ್ಛತೆ ಕಡೆಗೆ

ಕರ್ನಾಟಕ ಸರ್ಕಾರ

unicef
for every child

# ಅಂಗನವಾಡಿ ಶುಚಿತ್ವ, ಶೌಚಾಲಯಗಳ ಮಹತ್ವ ಮತ್ತು ನಿರ್ವಹಣೆಗಳ ಬಗ್ಗೆ ಮಾರ್ಗಸೂಚಿಗಳು




ಅನುವಾದ : ಸ್ನೇಹ ಸ್ವಯಂ ಸೇವಾ ಸಂಸ್ಥೆ, ಮೈಸೂರು
Website : www.sneha-ngo.org

ಫ್ಲಿಪ್‌ಚಾರ್ಟ್ ಹೆಸರು : **"ಅಂಗನವಾಡಿ ಸುಚಿತ್ವ, ಶೌಚಾಲಯುಗಳ ಮಹತ್ವ ಮತ್ತು ನಿರ್ವಹಣೆಗಳ ಬಗ್ಗೆ ಮಾರ್ಗಸೂಚಿಗಳು"**

ಅನುವಾದ : **ಸ್ನೇಹ ಸ್ವಯಂ ಸೇವಾ ಸಂಸ್ಥೆ, ಮೈಸೂರು**

ಮುಖಪುಟ ವಿನ್ಯಾಸ ಹಾಗೂ ಚಿತ್ರಗಳು : ಹೆಚ್. ಪಿ. ಅನಿಲ್‌ಕುಮಾರ್ (ಪಾಂಡವಪುರ),
ಎನ್. ಅನಿಲ್‌ಕುಮಾರ್ (ಚಾಮರಾಜನಗರ)

ಸಹಕಾರ : **ಯುೂನಿಸೆಫ್**



# ಸ್ವಚ್ಛ ಅಂಗನವಾಡಿಗಳು













- ಅಂಗನವಾಡಿ ಕೇಂದ್ರವು ಸಾಕಷ್ಟು ಗಾಳಿ ಮತ್ತು ಬೆಳಕಿನಿಂದ ಕೂಡಿರಬೇಕು.
- ಬಿರುಕು, ಒರಟುಮೇಲ್ಮೈ, ತೆರೆದ ಸಂದು ಮೂಲೆ ಮೊದಲಾದವುಗಳಿದ್ದರೆ ಕೂಡಲೇ ದುರಸ್ತಿ ಮಾಡಬೇಕು ಹಾಗೂ ನಿಯಮಿತವಾಗಿ ಸ್ವಚ್ಛ ಮಾಡುತ್ತಿರಬೇಕು.
- ಛಾವಣಿ, ಗೋಡೆಯ ಮೇಲೆ ಕಟ್ಟಿಕೊಂಡ ಜೇಡರಬಲೆಯನ್ನು ಆಗಾಗ ತೆಗೆದು ಸ್ವಚ್ಛಗೊಳಿಸಬೇಕು.
- ನೆಲವನ್ನು ಚಾಪೆ, ಮ್ಯಾಟ್ ಮತ್ತು ಜಮಖಾನೆಗಳನ್ನು ತೆಗೆದು ಸ್ವಚ್ಛಗೊಳಿಸಬೇಕು.
- ಕೀಟಗಳು ಸೇರಿಕೊಂಡು ತೊಂದರೆ ಉಂಟು ಮಾಡುವಂತಹ ತೂತು / ಬಿರುಕು ಮತ್ತು ಚರಂಡಿಗಳನ್ನು ಕೂಡಲೇ ಮುಚ್ಚಿಸಬೇಕು.



# ಸ್ವಚ್ಛ ಆವರಣ













- ಅಂಗನವಾಡಿ ಕಸ, ಕೊಳೆಗಳನ್ನು ಮುಚ್ಚಿದ ಕಸದ ಡಬ್ಬಗಳಲ್ಲಿ ಶೇಖರಿಸಬೇಕು ಹಾಗೂ ಗೊಬ್ಬರದ ಗುಂಡಿಯಲ್ಲಿ ಹಾಕಬೇಕು.
- ಬೇಡದ ವಸ್ತು/ತ್ಯಾಜ್ಯಗಳನ್ನು ಸಮಯಕ್ಕೆ ಸರಿಯಾಗಿ ವಿಲೇವಾರಿ ಕಡ್ಡಾಯ ಗೊಳಿಸಬೇಕು ಹಾಗೂ ತ್ಯಾಜ್ಯ ಡಬ್ಬಿಗಳನ್ನು ಪ್ರತಿ ದಿನವೂ ಖಾಲಿಮಾಡಿ ಸೋಂಕುನಿವಾರಕಗಳಿಂದ ಸ್ವಚ್ಛಗೊಳಿಸಿ ಪುನಃ ಬಳಕೆ ಮಾಡುವ ಮೊದಲು ಒಣಗಿರಬೇಕು.
- ಸೊಳ್ಳೆ ಹೆಚ್ಚುವುದನ್ನು ತಪ್ಪಿಸಲು ಅಂಗನವಾಡಿ ಸುತ್ತಮುತ್ತಲಿನ ಆವರಣ, ಶೌಚಾಲಯ ಮತ್ತು ಕೈಪಂಪಿನ ಸಮೀಪದಲ್ಲಿ ನೀರು ನಿಲ್ಲುವುದನ್ನು ತಪ್ಪಿಸಬೇಕು.
- ಅಡುಗೆ ಮನೆ ತ್ಯಾಜ್ಯ ನೀರನ್ನು ನೆನೆ ಹೊಂಡ ಅಥವಾ ಕೈತೋಟಕ್ಕೆ ಹರಿಯುವಂತೆ ಸೂಕ್ತ ನೀರು ಕಾಲುವೆ ರೂಪಿಸುವ ಮೂಲಕ ಅಂಗನವಾಡಿ ಅಡುಗೆ ಮನೆಯಿಂದ ಹೊರಬರುವ ತ್ಯಾಜ್ಯ ನೀರನ್ನು ಸುರಕ್ಷಿತ ಮತ್ತು ಸೂಕ್ತವಾಗಿ ವಿಲೇವಾರಿ ಮಾಡಬೇಕು.



# ಸ್ವಯಂ ಶುದ್ಧತೆ





- ನಿಯಮಿತವಾಗಿ ಕೂದಲನ್ನು ಸ್ವಚ್ಛಗೊಳಿಸಬೇಕು. ಕೂದಲನ್ನು ಪ್ರತಿ ದಿನವೂ ಬಾಚುತ್ತಿರಬೇಕು ಹಾಗೂ ಕೂದಲಲ್ಲಿ ಕೀಟಾಣುಗಳಿವೆಯೇ (ಹೇನು) ಎಂದು ಪರೀಕ್ಷಿಸುತ್ತಿರಬೇಕು.
- ಪ್ರತಿದಿನ ಮುಂಜಾನೆ ಮತ್ತು ರಾತ್ರಿ ಮಲಗುವ ಮುನ್ನ ಹಲ್ಲನ್ನು ಉಜ್ಜಬೇಕು.
- ಪ್ರತಿದಿನವೂ ಸ್ನಾನ ಮಾಡಬೇಕು ಮತ್ತು ಶುದ್ಧ ಬಟ್ಟೆಗಳನ್ನು ಧರಿಸಬೇಕು.
- ಕೈ ನ ಎಲ್ಲ ಭಾಗಗಳು ಮತ್ತು ಮೊಣಕೈ ಚೆನ್ನಾಗಿ ಉಜ್ಜಿ ತೊಳೆಯಬೇಕು.
- ಪಾದಗಳಿಗೆ ಮಣ್ಣಿನ ಸೋಂಕಾಗುವುನ್ನು ತಡೆಯಲು ಚಪ್ಪಲಿ/ಶೂ ಧರಿಸಬೇಕು.
- ಶೌಚಾಲಯ ಬಳಕೆ ಬಳಿಕ ಮತ್ತು ಊಟ-ತಿಂಡಿಗೆ ಮುನ್ನ, ಶಿಶು ಮಲಮೂತ್ರ ಶುದ್ಧಗೊಳಿಸಿದ ನಂತರ, ಗಾಯಗಳಿಗೆ ಚಿಕಿತ್ಸೆ ಮಾಡುವ ಮೊದಲು, ತ್ಯಾಜ್ಯ ಮತ್ತು ಕಸಕಡ್ಡಿ ನಿರ್ವಹಣೆ ಬಳಿಕ ಇವೇ ಮೊದಲಾದ ಸಂದರ್ಭಗಳಲ್ಲಿ ಸೋಪಿನಿಂದ ತಪ್ಪದೇ ಕೈತೊಳೆಯಬೇಕು. ಕೈಉಗುರುಗಳನ್ನು ಆಗಾಗ ಕತ್ತರಿಸುತ್ತಿರಬೇಕು.
- ಅಂಗನವಾಡಿಯಲ್ಲಿರುವ ಸಿಂಕ್‌ಗಳು ಚಿಕ್ಕಮಕ್ಕಳ ಕೈಗೆ ಎಟುಕುವಂತಿರಬೇಕು ಮತ್ತು ನಿಯಮಿತವಾಗಿ ಸ್ವಚ್ಛಗೊಳಿಸಬೇಕು.



# ಸ್ವಚ್ಛ ಆಹಾರ





- ಅಡುಗೆ ಮಾಡುವ ಪಾತ್ರೆಗಳು ಮತ್ತು ಆಹಾರ ಬಡಿಸುವ ಸಾಧನಗಳನ್ನು ಸೂಕ್ತವಾದ ಸಾಬೂನಿನಿಂದ ಉಜ್ಜಿ ಸ್ವಚ್ಛ ನೀರಿನಲ್ಲಿ ತೊಳೆದಿರಬೇಕು.
- ಬೇಳೆಕಾಳುಗಳು ಮತ್ತು ಅಕ್ಕಿಗಳನ್ನು ಗಾಳಿಯಾಡದ ಬಿಗಿಯಾದ ಗೋಣಿಚೀಲದಲ್ಲಿ ಅಥವಾ ಡಬ್ಬದಲ್ಲಿ ಶೇಖರಿಸಿಡಬೇಕು.
- ಟಿಎಚ್ಆರ್ ಅನ್ನು ಸ್ವಚ್ಛ ಸ್ಥಳಗಳಲ್ಲಿ ಶೇಖರಿಸಬೇಕು ಮತ್ತು ಪ್ಲಾಸ್ಟಿಕ್‌ಶೀಟಿನಿಂದ ಮುಚ್ಚಿ ತೇವದಿಂದ ದೂರವಿಡಬೇಕು.
- ಗೋಡೆಯಿಂದ ದೂರಕ್ಕೆ ಆಹಾರ ವಸ್ತುಗಳನ್ನು ಹಲಗೆಯ ಪೇರಿಸಿಡ ಮೇಲೆಬೇಕು.
- ತಾಜಾ ವಸ್ತುಗಳನ್ನು ಬಳಸುವ ಮೊದಲು ಹಳೆ ದಾಸ್ತಾನು ಮತ್ತು ವಸ್ತು ಬಳಸಿಕೊಳ್ಳಬೇಕು.
- ಆಹಾರ ವಸ್ತುಗಳು, ಎಣ್ಣೆ ಮತ್ತು ನೀರನ್ನು ಸಂಗ್ರಹಿಸಲು ರಾಸಾಯನಿಕ ಔಷಧಿ ಡಬ್ಬಗಳನ್ನು ಬಳಸಕೂಡದು.
- ಅಡುಗೆ ಬಡಿಸಲು ಉದ್ದವಾದ ಸೌಟು ಅಥವಾ ಚಮಚಗಳನ್ನು ಉಪಯೋಗಿಸಬೇಕು.
- ಅಡುಗೆಗೆ ಬಳಸುತ್ತಿರುವ ಪದಾರ್ಥಗಳು ಕಲಬೆರಕೆ ಮತ್ತು ಕೀಟಗಳ ಸೋಂಕಿನಿಂದ ಮುಕ್ತವಾಗಿದೆಯೇ ಎಂದು ಖಾತ್ರಿ ಪಡಿಸಿಕೊಳ್ಳಿ.
- ಅಡುಗೆ ಮನೆಯ ಆವರಣದಲ್ಲಿ ಯಾವುದೇ ಬಗೆಯ ವಿಷಯುಕ್ತ ರಾಸಾಯನಿಕಗಳು, ವಿಷಪದಾರ್ಥಗಳು / ಸೊಂಕುನಿವಾರಕಗಳನ್ನು ಶೇಖರಿಸಿ ಇಡಬಾರದು.



# ಸ್ವಚ್ಛ ಕುಡಿಯುವ ನೀರು















- ಆಹಾರ ವಸ್ತುಗಳನ್ನು ತೊಳೆಯಲು ಬಳಸುವ ನೀರು ಆಹಾರ ವಸ್ತುಗಳನ್ನು ಹಾಳು ಮಾಡದಂತೆ ಇಟ್ಟಿರಬೇಕು.
- ನೀರನ್ನು ಸಂಗ್ರಹಿಸುವ ಟ್ಯಾಂಕ್/ಬಕೆಟ್‌ಗಳನ್ನು ಆಗಾಗ ಸ್ವಚ್ಛಗೊಳಿಸುತ್ತಿರಬೇಕು.
- ಕುಡಿಯುವ ನೀರನ್ನು ಶುದ್ಧ ಮತ್ತು ಸುರಕ್ಷಿತವಾಗಿರುವ ಪಾತ್ರೆಗಳಲ್ಲಿ ಸಂಗ್ರಹಿಸಿಡಬೇಕು.
- ನಲ್ಲಿ ಇರುವಂತಹ ಪಾತ್ರೆಗಳನ್ನೇ ಉಪಯೋಗಿಸಬೇಕು.
- ಪಾತ್ರೆಗಳಿಂದ ನೀರನ್ನು ತೆಗೆದುಕೊಳ್ಳುವಾಗ ಅದರಲ್ಲಿ ಕೈ ಮುಳುಗಕೂಡದು. ಒಂದು ವೇಳೆ ನೀರಿನ ಫಿಲ್ಟರ್/ಪ್ಯೂರಿಫೈರ್‌ಗಳನ್ನು ಬಳಸಿದರೆ ಅದರಲ್ಲಿ ಸೂಚಿಸಿರುವ ಸ್ವಚ್ಛತಾ ನಿಯಮಗಳನ್ನು ಪಾಲಿಸಲೇಬೇಕು.
- ಕುಡಿಯಲು ಹಾಗೂ ಅಡುಗೆಗೆ ಕಾಯಿಸಿದ ನೀರನ್ನು ಬಳಸುವುದು ಮತ್ತು ನೀರಿನ ಶುದ್ಧೀಕರಣ ಹಾಗೂ ಸಂಸ್ಕರಣದ ಸೂಕ್ತ ಕ್ರಮವಾಗಿರುತ್ತದೆ.

# ಸ್ವಚ್ಛ ಶೌಚಾಲಯ












- ಶೌಚಾಲಯಗಳನ್ನು ಪ್ರತಿದಿನ ಮುಂಜಾನೆ ಮತ್ತು ಮಕ್ಕಳು ಮನೆಗೆ ತೆರಳಿದ ಬಳಿಕ ಸ್ವಚ್ಛಗೊಳಿಸಬೇಕು ಮತ್ತು ಎಲ್ಲ ಸಮಯದಲ್ಲಿಯೂ ಅಚ್ಚುಕಟ್ಟಾಗಿರಬೇಕು.
- ಶೌಚಾಲಯದ ಸಮೀಪ ಸೂಕ್ತಸ್ಥಳದಲ್ಲಿ ಸೋಪು ಮತ್ತು ನೀರನ್ನು ಇಟ್ಟಿರಬೇಕು.
- ಶೌಚಾಲಯಕ್ಕೆ ನಿಯಮಿತವಾಗಿ ನೀರಿನ ಪೂರೈಕೆ ಇರಬೇಕು.
- ಮಕ್ಕಳ ಸ್ನೇಹಿ ಶೌಚಾಲಯವಿರುವುದು ಹೆಚ್ಚು ಸೂಕ್ತ.
- ಮಕ್ಕಳ ಸ್ನೇಹಿ ಶೌಚಾಲಯದ ಮುಖ್ಯ ಅಗತ್ಯಗಳು ಈ ಕೆಳಗಿನಂತಿವೆ:

1. ಹೆಣ್ಣು ಮಕ್ಕಳಿಗೆ ಹಾಗೂ ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯವಿರಬೇಕು.
2. ಮಕ್ಕಳಿಗೆ ಖಾಸಗಿತನ ಕಾಪಾಡುವಂತಿರಬೇಕು.
3. ಗೋಡೆಗಳು ಸಾಕು ಪ್ರಾಣಿಗಳು, ಕಂಡು ಪ್ರಾಣಿ ಹೀಗೆ ಆಕರ್ಷಕ ಚಿತ್ರಗಳಿಂದ ಕೂಡಿರಬೇಕು.
4. ಶೌಚಾಲಯದ ಒಳಗಡೆ ಸ್ವಚ್ಛಗೊಳಿಸುವ ಹಾಗೂ ತೊಳೆಯುವ ಸಾಧನಗಳಿರಬೇಕು.

# ಶುದ್ಧ ನೀರಿನ ಸಂಗ್ರಹ



# ನಿಯಮಾನುಸಾರ ಅಂಗನವಾಡಿ ಕೇಂದ್ರದಲ್ಲಿ ಅವಶ್ಯವಾಗಿ ಇರಬೇಕಾದ ಶುದ್ಧ ನೀರಿನ ಸಂಗ್ರಹ

| ಕ್ರ.ಸಂ | ಫಲಾನುಭವಿ ಅನುಸಾರ ಅಂಗನವಾಡಿ ಕೇಂದ್ರದಲ್ಲಿ ಬಳಕೆಯಾಗುವ ನೀರಿನ ವಿವರ | ಒಂದು ದಿನಕ್ಕೆ ಬೇಕಾಗುವ ಕುಡಿಯುವ ನೀರು | ಒಂದು ದಿನಕ್ಕೆ ಅಡುಗೆ ಮಾಡಲು ಬೇಕಾಗುವ ಕುಡಿಯುವ ನೀರು | ಕನಿಷ್ಠ ಸಂಗ್ರಹಿಸ ಬಹುದಾದ ಶುದ್ದ ಕುಡಿಯುವ ನೀರು ಪ್ರಮಾಣ |
|---|---|---|---|---|
| 1 | 3 ರಿಂದ 5 ವರ್ಷದ ಮಕ್ಕಳಿಗೆ | ಕುಡಿಯಲು 1 ಮಗುವಿಗೆ 1 ಲೀ. ನೀರಿನಂತೆ 20 ಮಕ್ಕಳಿಗೆ 20 ಲೀ. ನೀರು ಬೇಕಾಗುತ್ತದೆ | ಅಡುಗೆ ಮಾಡಲು 1 ಮಗುವಿದೆ 1.5 ಲೀ ನೀರಿನಂತೆ 20 ಮಕ್ಕಳಿಗೆ 30 ಲೀ ನೀರು ಬೇಕಾಗುತ್ತದೆ | 40 ಲೀಟರ್ |
| 2 | ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಗೆ | ಒಬ್ಬರಿಗೆ 2.5 ಲೀ. ನೀರಿನಂತೆ ಇಬ್ಬರಿಗೆ ಒಟ್ಟು 5 ಲೀ. ನೀರು ಬೇಕಾಗುತ್ತದೆ | | 5 ಲೀಟರ್ |
| 3 | ಹದಿಹರೆಯ ಹೆಣ್ಣು ಮಕ್ಕಳಿಗಾಗಿ | ಒಬ್ಬರಿಗೆ 0.5 ಲೀ. ನೀರಿನಂತೆ 10 ಜನ ಹದಿಹರೆಯ ಹೆಣ್ಣು ಮಕ್ಕಳಿಗೆ ಒಟ್ಟು 5 ಲೀ. ನೀರು ಬೇಕಾಗುತ್ತದೆ | | 5 ಲೀಟರ್ |
| 4 | ಮಹಿಳೆ / ಬಾಣಂತಿ ಮಹಿಳೆಯರಿಗಾಗಿ | ಒಬ್ಬ ಬಾಣಂತಿ ಮಹಿಳೆಗೆ 0.5 ಲೀ. ನೀರಿನಂತೆ 15 ಜನ ಬಾಣಂತಿ ಮಹಿಳೆಯರಿಗೆ ಒಟ್ಟು 7.5 ಲೀ. ನೀರು ಬೇಕಾಗುತ್ತದೆ | | 7.5 ಲೀಟರ್ |
| | | | ಒಟ್ಟು | 57.5 ಲೀಟರ್ |

ಪ್ರತಿ ಅಂಗನವಾಡಿ ಕೇಂದ್ರದಲ್ಲಿ ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳಿಗೆ ಅನುಗುಣವಾಗಿ ಕುಡಿಯಲು, ಅಡುಗೆ ಮಾಡಲು ಶುದ್ಧ ಕುಡಿಯುವ ನೀರನ್ನು ಅವಶ್ಯವಾಗಿ ನಿಯಮಾನುಸಾರ ಸಂಗ್ರಹಿಸಬೇಕಾಗುತ್ತದೆ.

# ಅಂಗನವಾಡಿ ಕೇಂದ್ರದಲ್ಲಿ ಇರಬೇಕಾದ ಕುಡಿಯುವ ನೀರಿನ ನಲ್ಲಿಗಳು



## ಅಂಗನವಾಡಿ ಕೇಂದ್ರದಲ್ಲಿ ಅವಶ್ಯವಾಗಿ ಇರಬೇಕಾದ ಶುದ್ಧ ಕುಡಿಯುವ ನೀರಿನ ನಳಗಳು/ನಲ್ಲಿ

| ಕ್ರ.ಸಂ | ಫಲಾನುಭವಿ ಅನುಸಾರ ಅಂಗನವಾಡಿ ಕೇಂದ್ರದಲ್ಲಿ ನೀರಿನ ನಲ್ಲಿ ಬಳಸುವವರ ಆಧಾರದ ಮೇಲೆ | ಫಲಾನುಭವಿಗಳಿಗೆ ಅನುಗುಣವಾಗಿ ಬೇಕಾಗುವ ನಲ್ಲಿಗಳ ಸಂಖ್ಯೆ |
|---|---|---|
| 1 | 1–15 ಮಕ್ಕಳಿಗೆ | 1 |
| 2 | 15–30 ಮಕ್ಕಳಿಗೆ | 2 |
| 3 | 1–25 ಹದಿಹರೆಯ ಹೆಣ್ಣು ಮಕ್ಕಳಿಗಾಗಿ | 1 |
| 4 | 1–25 ಮಹಿಳೆಯರಿಗಾಗಿ | 1 |
| 5 | ಅಡುಗೆ ಮನೆಯಲ್ಲಿ | 1 |
| 6 | ಪಾತ್ರೆಗಳನ್ನು ತೊಳೆಯುವ ಸ್ಥಳದಲ್ಲಿ | 1 |

ಅಂಗನವಾಡಿ ಕೇಂದ್ರದಲ್ಲಿ ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳಿಗೆ ಅನುಗುಣವಾಗಿ ಪ್ರತ್ಯೇಕ ಕುಡಿಯುವ ನೀರಿನ ನಲ್ಲಿ, ಪ್ರತ್ಯೇಕವಾಗಿ ಅಡುಗೆ ಮನೆಯಲ್ಲಿ ಮತ್ತು ಪಾತ್ರೆ ತೊಳೆಯುವ ಸ್ಥಳದಲ್ಲಿ ನಲ್ಲಿಗಳನ್ನು ಅಳವಡಿಸಿಕೊಳ್ಳಬಹುದು.



# ಅಂಗನವಾಡಿ ಕೇಂದ್ರದಲ್ಲಿ ಇರಬೇಕಾದ

## ಕೈ ಮತ್ತು ಪಾತ್ರೆಗಳನ್ನು ತೊಳೆಯಲು ಅವಶ್ಯವಾಗಿ ಸಂಗ್ರಹಿಸಬೇಕಾದ ನೀರು













# ನಿಯಮಾನುಸಾರ ಅಂಗನವಾಡಿ ಕೇಂದ್ರದಲ್ಲಿ ಕೈ ಮತ್ತು ಪಾತ್ರೆಗಳನ್ನು ತೊಳೆಯಲು ಅವಶ್ಯವಾಗಿ ಸಂಗ್ರಹಿಸಿಡಬೇಕಾದ ನೀರು

| ಕ್ರ.ಸಂ | ಫಲಾನುಭವಿ ಅನುಸಾರ ಅಂಗನವಾಡಿ ಕೇಂದ್ರದಲ್ಲಿ ಬಳಕೆಯಾಗುವ ನೀರಿನ ವಿವರ | ಕೈತೊಳೆಯಲು ಬೇಕಾಗುವ ನೀರಿನ ಪ್ರಮಾಣ | ಅಡುಗೆ ಮಾಡಿದ ಪಾತ್ರೆಗಳನ್ನು ತೊಳೆಯಲು ಬೇಕಾಗುವ ನೀರಿನ ಪ್ರಮಾಣ | ಸ್ವಚ್ಛಗೊಳಿಸಲು ಸಂಗ್ರಹಿಸ ಬಹುದಾದ ಕನಿಷ್ಠ ನೀರು ಪ್ರಮಾಣ |
|---|---|---|---|---|
| 1 | 3 ರಿಂದ 5 ವರ್ಷದ ಮಕ್ಕಳಿಗೆ | 1 ಮಗುವಿಗೆ 35 ಲೀ. ನೀರಿನಂತೆ 20 ಮಕ್ಕಳಿಗೆ 700 ಲೀ. ನೀರು ಬೇಕಾಗುತ್ತದೆ | 1 ಮಗುವಿದೆ 5 ಲೀ ನೀರಿನಂತೆ 20 ಮಕ್ಕಳಿಗೆ 100 ಲೀ ನೀರು ಬೇಕಾಗುತ್ತದೆ | 600 ಲೀಟರ್ |
| 2 | ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಗೆ | ಒಬ್ಬರಿಗೆ 30 ಲೀ. ನೀರಿನಂತೆ ಇಬ್ಬರಿಗೆ ಒಟ್ಟು 60 ಲೀ. ನೀರು ಬೇಕಾಗುತ್ತದೆ | | 60 ಲೀಟರ್ |
| 3 | ಹದಿಹರೆಯ ಹೆಣ್ಣು ಮಕ್ಕಳಿಗಾಗಿ | ಒಬ್ಬರಿಗೆ 10 ಲೀ. ನೀರಿನಂತೆ 10 ಜನ ಹದಿಹರೆಯ ಹೆಣ್ಣು ಮಕ್ಕಳಿಗೆ ಒಟ್ಟು 100 ಲೀ. ನೀರು ಬೇಕಾಗುತ್ತದೆ | | 100 ಲೀಟರ್ |
| 4 | ಮಹಿಳೆ / ಬಾಣಂತಿ ಮಹಿಳೆಯರಿಗಾಗಿ | ಒಬ್ಬ ಬಾಣಂತಿ ಮಹಿಳೆಗೆ 10 ಲೀ. ನೀರಿನಂತೆ 15 ಜನ ಬಾಣಂತಿ ಮಹಿಳೆಯರಿಗೆ ಒಟ್ಟು 150 ಲೀ. ನೀರು ಬೇಕಾಗುತ್ತದೆ | | 150 ಲೀಟರ್ |
| | | | ಒಟ್ಟು | 910 ಲೀಟರ್ |

ಪ್ರತಿ ಅಂಗನವಾಡಿ ಕೇಂದ್ರದಲ್ಲಿ ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳಿಗೆ ಅನುಗುಣವಾಗಿ ಕೈ ತೊಳೆಯಲು ಮತ್ತು ಸ್ವಚ್ಛಗೊಳಿಸಲು ಅವಶ್ಯವಾಗಿ ನಿಯಮಾನುಸಾರ ಸಂಗ್ರಹಿಸಬಹುದಾದ ನೀರು ಪ್ರಮಾಣ

# ಮೂತ್ರಾಲಯಗಳು


ಮೂತ್ರಾಲಯ
1 ರಿಂದ 30 ಮಕ್ಕಳಿಗೆ


ಮೂತ್ರಾಲಯ
1 ರಿಂದ 30 ಹದಿಹರೆಯದ ಹೆಣ್ಣುಮಕ್ಕಳಿಗೆ


ಮೂತ್ರಾಲಯ
1 ರಿಂದ 30 ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು.

# ನಿಯಮಾನುಸಾರ ಅಂಗನವಾಡಿ ಕೇಂದ್ರದಲ್ಲಿ ಇರಬೇಕಾದ ಮೂತ್ರಾಲಯಗಳು

| ಕ್ರ.ಸಂ | ಅಂಗನವಾಡಿ ಕೇಂದ್ರದಲ್ಲಿ ಮೂತ್ರಾಲಯ ಬಳಸುವವರ ಪ್ರಮಾಣಕೆ ಅನುಗುಣವಾಗಿ | ಮೂತ್ರಾಲಯಗಳ ಸಂಖ್ಯೆ | ನಲ್ಲಿಗಳ ಸಂಖ್ಯೆ (ಸ್ವಚ್ಛಗೊಳಿಸಲು) |
|---|---|---|---|
| 1 | 1–30 ಮಕ್ಕಳಿಗೆ | 1 | 1 |
| 2 | 1–30 ಹದಿಹರೆಯ ಹೆಣ್ಣು ಮಕ್ಕಳಿಗೆ | 1 | 1 |
| 3 | ಮಹಿಳೆಯರು, ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಗೆ | | |

ಅಂಗನವಾಡಿ ಕೇಂದ್ರದಲ್ಲಿ ಮಹಿಳೆಯರು ಮತ್ತು ಹದಿಹರೆಯ ಹೆಣ್ಣು ಮಕ್ಕಳು ಶೌಚಾಲಯವನ್ನು ಮೂತ್ರಾಲಯಕ್ಕಾಗಿಯೂ ಬಳಸಬಹುದು ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳಿಗೆ ಅನುಗುಣವಾಗಿ ಪ್ರತ್ಯೇಕವಾಗಿ ನಿರ್ಮಿಸಬಹುದು.



# ಅಂಗನವಾಡಿ ಕೇಂದ್ರದಲ್ಲಿ ಇರಬೇಕಾದ

# ಶೌಚಾಲಯಗಳು








# ನಿಯಮಾನುಸಾರ ಅಂಗನವಾಡಿ ಕೇಂದ್ರದಲ್ಲಿ ಇರಬೇಕಾದ ಶೌಚಾಲಯಗಳು

| ಕ್ರ.ಸಂ | ಅಂಗನವಾಡಿ ಕೇಂದ್ರದಲ್ಲಿ ಮೂತ್ರಾಲಯ ಬಳಸುವವರ ಪ್ರಮಾಣಕೆ ಅನುಗುಣವಾಗಿ | ಮೂತ್ರಾಲಯಗಳ ಸಂಖ್ಯೆ | ನಲ್ಲಿಗಳ ಸಂಖ್ಯೆ (ಸ್ವಚ್ಛಗೊಳಿಸಲು) |
|---|---|---|---|
| 1 | 1–15 ಮಕ್ಕಳಿಗೆ | 1 | 1 |
| 2 | 16–30 ಮಕ್ಕಳಿಗೆ | 2 | 2 |
| 3 | 1–30 ಹದಿಹರೆಯ ಹೆಣ್ಣು ಮಕ್ಕಳಿಗೆ | 1 | 1 |
| 4 | ಮಹಿಳೆಯರು, ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಗೆ | | |

ಸ್ಥಳೀಯ ಅಭ್ಯಾಸಗಳಿಗೆ ಅನುಗುಣವಾಗಿ ಶೌಚಾಲಯಗಳನ್ನು ನಿರ್ಮಿಸಬಹುದು ಮತ್ತು ಪ್ರತ್ಯೇಕ ಮೂತ್ರಾಲಯ ಇದ್ದರೆ ಪ್ರತ್ಯೇಕ ಶೌಚಾಲಯಗಳ ಅವಶ್ಯಕತೆ ಇರುವುದಿಲ್ಲ ಹಾಗೂ ಅಂಗನವಾಡಿ ಕೇಂದ್ರದಲ್ಲಿ ಮಹಿಳೆಯರು ಮತ್ತು ಹದಿಹರೆಯ ಹೆಣ್ಣು ಮಕ್ಕಳು ಶೌಚಾಲಯವನ್ನು ಮೂತ್ರಾಲಯಕ್ಕಾಗಿಯೂ ಬಳಸಬಹುದು ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳಿಗೆ ಅನುಗುಣವಾಗಿ ಪ್ರತ್ಯೇಕವಾಗಿ ನಿರ್ಮಿಸಬಹುದು.

# ಅಂಗನವಾಡಿ ಕಾರ್ಯಕರ್ತೆಯರ ಕರ್ತವ್ಯ ಮತ್ತು ಜವಬ್ದಾರಿಗಳು



- ಸ್ವಚ್ಛತಾ ಅಭ್ಯಾಸಗಳ ಬಗ್ಗೆ ಮಕ್ಕಳು, ತಾಯಂದಿರು ಮತ್ತು ಇತರ ಸಮುದಾಯದ ಸದಸ್ಯರಿಗೆ ತಿಳಿಸುವುದು.
- ಹದಿಹರೆಯದ ಹೆಣ್ಣು ಮಕ್ಕಳಿಗೆ ಮತ್ತು ಮಹಿಳೆಯರಿಗೆ ಪರಿಸರ ಸ್ವಚ್ಛತೆ, ನೀರು, ತ್ಯಾಜ್ಯ ನಿರ್ವಹಣೆ ಹಾಗೂ ಮುಟ್ಟಿನ ದಿನದ ಬಗ್ಗೆ ಅರಿವು ಮೂಡಿಸುವುದು.
- ಮಕ್ಕಳಿಗೆ ಆಟದ ಮೂಲಕ ಸ್ವಚ್ಛತಾ ಪಾಠ ತಿಳಿಸುವುದು ಮತ್ತು ನಿರಂತರವಾಗಿ ಮಕ್ಕಳಲ್ಲಿ ಆಗುವ ಬದಲಾವಣೆಯನ್ನು ಗಮನಿಸುವುದು.
- ಅಂಗನವಾಡಿ ಕೇಂದ್ರದಲ್ಲಿ ನೀರು, ನೈರ್ಮಲ್ಯ ಮತ್ತು ಸ್ವಚ್ಛತೆಯ ಮೂಲಭೂತ ಸೌಕರ್ಯಗಳು ಇರಬೇಕು. ಇಲ್ಲವಾದಲ್ಲಿ ಭಾಗಿದಾರರು ಈ ಬಗ್ಗೆ ಹೆಚ್ಚಿನ ಗಮನ ವಹಿಸಬೇಕು.
- ಅಂಗನವಾಡಿ ನೀರು, ನೈರ್ಮಲ್ಯ ಮತ್ತು ಸ್ವಚ್ಛತೆಯ ಮೂಲಭೂತ ಸೌಕರ್ಯಗಳನ್ನು ಉತ್ತಮವಾಗಿ ನಿರ್ವಹಿಸಲು ಇಲಾಖೆ ಮತ್ತು ಸಮುದಾಯದೊಂದಿಗೆ ಉತ್ತಮ ಬಾಂದವ್ಯ ಹೊಂದಿರಬೇಕು.
- ಅಂಗನವಾಡಿಯ ಸಹಾಯಕಿಯರು ಸ್ವಚ್ಛತೆ ಬಗ್ಗೆ ಹೆಚ್ಚಿನ ಗಮನವಹಿಸಬೇಕು.
- ಅಂಗನವಾಡಿ ಕೇಂದ್ರದಲ್ಲಿ ನೀರು, ನೈರ್ಮಲ್ಯ ಮತ್ತು ಸ್ವಚ್ಛತೆಗೆ ಸಂಬಂಧಪಟ್ಟ ಎಲ್ಲಾ ವಿಶೇಷ ದಿನಾಚರಣೆಗಳನ್ನು ಆಚರಿಸುವುದು.

# ತಾಯಂದಿರ ಕರ್ತವ್ಯ



- ತಾಯಂದಿರು ಅಂಗನವಾಡಿಯಲ್ಲಿ ಕಲಿತ ಶೌಚಾಲಯ ಮಹತ್ವ, ಬಳಕೆ ನಿರ್ವಹಣೆ, ಚಿಕ್ಕ ಮಕ್ಕಳ ಮಲ ಮೂತ್ರ ಸ್ವಚ್ಛತೆ, ಪರಿಸರ ಸಂರಕ್ಷಣೆ, ತಾಜ್ಯ ನಿರ್ಹಹಣೆ ಮತ್ತು ನೀರಿನ ನಿರ್ವವಹಣೆ ಮತ್ತು ಮಹತ್ವವನ್ನು ತಾವು ಅರಿತುಕೊಂಡು ನಿರ್ವಹಿಸುವುದು ಮತ್ತು ಸಮುದಾಯಕೆ ತಿಳಿಸುವುದು.
- ಮನೆಯಲ್ಲಿ ತಾಯಂದಿರು ಮಕ್ಕಳ ಸ್ವಚ್ಛತಾ ಅಭ್ಯಾಸಗಳ ಬಗ್ಗೆ ಹೆಚ್ಚಿನ ಗಮನ ವಹಿಸಿ ನಿರ್ವಹಿಸುವಂತೆ ಕ್ರಮವಹಿಸುವುದು.
- ನೀರು, ನೈರ್ಮಲ್ಯ ಮತ್ತು ಸ್ವಚ್ಛತಾ ವಿಶೇಷ ದಿನಾಚರಣೆಗಳನ್ನು ಆಚರಿಸುವುದು ಮನೆ ಮತ್ತು ಸಮುದಾಯದಲ್ಲಿ ಸ್ವಚ್ಛತಾ ಅಭ್ಯಾಸಗಳನ್ನು ಅನುಸರಿಸುವುದು.




ಅನುವಾದ : ಸ್ನೇಹ ಸ್ವಯಂ ಸೇವಾ ಸಂಸ್ಥೆ, ಮೈಸೂರು

Website : www.sneha-ngo.org